> **ಒಂದು ಗಂಡು ಮತ್ತು ಹೆಣ್ಣು ಸಂಕೋಚವಿಲ್ಲದೆ ಸಂಬಂಧದಲ್ಲಿ ಇದ್ದಾಗ ಅದನ್ನು ಆಕ್ಷೇಪಿಸುವುದು, ಅದೇ ಕಾರಣಕ್ಕೆ ಕಠಿಣ ಶಿಕ್ಷೆ ವಿಧಿಸುವುದು ತರವಲ್ಲ. ಆದರೆ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತ ಲೈಂಗಿಕ ಶಿಕ್ಷಣ ನೀಡುವುದೂ ಅವಶ್ಯಕವಾಗಿದೆ.**

16 ರಿಂದ 18ರ ವಯೋಮಾನಗಳ ಒಳಗಿನ ಬಾಲಕಿಯೊಂದಿಗೆ (ಪೋಕ್ಸೊ ಕಾಯ್ದೆಯಡಿಯಲ್ಲಿ ಬಾಲಕನಿಗೂ ಸಂಬಂಧಿಸಿದಂತೆ) ಉಂಟಾಗಿರುವ ಕ್ರಿಯೆಯಲ್ಲಿ (ಲೈಂಗಿಕ ಕ್ರಿಯೆಗಳಲ್ಲಿ) ಇಬ್ಬರ ಸಮ್ಮತಿಯಿಂದ ಆಗಿರುವುದೆಂದು ಕಂಡುಬಂದರೆ ವಿಧಿಸಬಹುದಾದ ಶಿಕ್ಷೆಯನ್ನು ಸಂಪೂರ್ಣವಾಗಿ ನ್ಯಾಯಾಲಯದ ವಿವೇಚನೆಗೆ ಬಿಡತಕ್ಕದ್ದೆಂದು ಪರಿಗಣಿಸುವಂತೆ ಕೆಲವು ದಶಕಗಳಿಂದ ಮಕ್ಕಳ ಹಕ್ಕು ಹೋರಾಟಗಾರರು ಕಾನೂನು ಆಯೋಗದ ಗಮನಕ್ಕೆ ತಂದರು.

ಇದನ್ನು ಬೆಂಬಲಿಸುವಂತೆ ಕರ್ನಾಟಕ ಮತ್ತು ಮಧ್ಯಪ್ರದೇಶ ಹೈಕೋರ್ಟ್‌ಗಳು ಲಿಖಿತರೂಪದಲ್ಲಿ ಕಾನೂನು ಆಯೋಗಕ್ಕೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದವು.

ಮಕ್ಕಳ ಹಕ್ಕು ಹೋರಾಟಗಾರರು ಮತ್ತು ಎರಡೂ ಹೈಕೋರ್ಟ್‌ಗಳು ಭಾರತದ ಕಾನೂನು ಆಯೋಗಕ್ಕೆ ಮಾಡಿದ ಒತ್ತಾಯವನ್ನು ಗಂಭೀರವಾಗಿ ಪರಿಗಣಿಸಿ, ಆಯೋಗವು 2023ರ ಸೆಪ್ಟೆಂಬರ್ 27ರಂದು ಒಂದು ಸಮಗ್ರ ವರದಿಯನ್ನು ಕಾನೂನು ಮತ್ತು ನ್ಯಾಯ ಸಚಿವಾಲಯ, ಕಾನೂನು ವ್ಯವಹಾರಗಳ ಇಲಾಖೆಗೆ ಸಲ್ಲಿಸಿತು. ತಮಗೆ ಸಲ್ಲಿಸಲಾಗಿದ್ದ ಬೇಡಿಕೆಗಳ ಅನುಗುಣವಾಗಿಯೇ ಕಾನೂನಿನಲ್ಲಿ ತಿದ್ದುಪಡಿ ತರಲು ಇರುವ ಸಂದರ್ಭಗಳನ್ನು ಮತ್ತು ಸಾಧ್ಯತೆಗಳನ್ನು ಗುರುತಿಸಿತು.

ಅದರಂತೆ, 16 ರಿಂದ 18ರ ಮಧ್ಯದ ವಯೋಮಾನದ ಬಾಲಕ ಮತ್ತು ಆರೋಪಿ ಮಧ್ಯೆ ಏರ್ಪಡುವ ಸಮ್ಮತಿಯ ಲೈಂಗಿಕ ಕ್ರಿಯೆ ಅಪರಾಧವಾದರೂ, ಪ್ರಕರಣದ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಅವರಿಗೆ ಅತ್ಯಂತ ಕಡಿಮೆ ಶಿಕ್ಷೆಯನ್ನು ವಿಧಿಸಲು ಭಾರತದ ಕಾನೂನು ಆಯೋಗ ಶಿಫಾರಸು ಮಾಡಿತು.



## ಶಿಫಾರಸು ಮಾಡಿದ ಪಟ್ಟಿಯಲ್ಲಿ ಅಳವಡಿಸಲಾದ ಪ್ರಮುಖ ಅಂಶಗಳು

- ಅವರ ಮಧ್ಯೆ ಲೈಂಗಿಕ ಕ್ರಿಯೆಗೆ ಸಂಬಂಧಪಟ್ಟಂತೆ ಸಮ್ಮತಿ ಎದ್ದು ಕಾಣದಿದ್ದರೂ ಮೌನ ಸಮ್ಮತಿ ಇರುವುದು ಕಂಡುಬಂದರೆ; ಅವರಿಬ್ಬರ ವಯೋಮಾನದ ನಡುವೆ 3 ವರ್ಷಗಳಿಗೆ ಮೀರದಂತೆ ವ್ಯತ್ಯಾಸವಿರಬಾರದು.
- ಆರೋಪಿಯ ಪೂರ್ವಾಪರ ಪ್ರಶ್ನಾತೀತವಾಗಿದ್ದು, ಅಪರಾಧಿಕ ಹಿನ್ನೆಲೆ ಇರಬಾರದು.
- ಆರೋಪಿಯು ಕೃತ್ಯದ ಉತ್ತರದಲ್ಲಿ ಸನ್ನಡತೆಯನ್ನು ಪ್ರದರ್ಶಿಸಿರಬೇಕು.
- ಕೃತ್ಯಕ್ಕೆ ಸಂಬಂಧಿಸಿದಂತೆ ಆರೋಪಿಯು ಸಂತ್ರಸ್ತ ಬಾಲಕ ಅಥವಾ ಬಾಲಕಿಯ ಮೇಲೆ ಯಾವುದೇ ಅನುಚಿತ ಪ್ರಭಾವ ಉಂಟು ಮಾಡದಿರುವುದು.
- ಮಕ್ಕಳ ಕಳ್ಳಸಾಗಣೆಯಲ್ಲಿ ಭಾಗವಹಿಸಿರಬಾರದು.
- ಆರೋಪಿಯು ಸಂತ್ರಸ್ತ ಮಗು ಮತ್ತು ಅದರ ರಕ್ತಸಂಬಂಧಿಗಳ ಮೇಲೆ ಪ್ರಭಾವ ಬೀರುವ ಸ್ಥಿತಿಯವನಾಗಿರಬಾರದು.
- ಸಂತ್ರಸ್ತ ಮಗುವಿಗೆ ಮತಾಂತರ ಮಾಡಿಸುವ ಉದ್ದೇಶ ಇಲ್ಲದಿರುವುದು ಕಂಡುಬರಬೇಕು.
- ಸಂತ್ರಸ್ತ ಮಗುವನ್ನು ಯಾವುದೇ ಕಾನೂನುಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಪ್ರಯತ್ನಗಳನ್ನು ಎಂದೂ ಮಾಡದವನಂತೆ ಕಂಡುಬರಬೇಕು.
- ಸಂತ್ರಸ್ತ ಬಾಲಕಿ/ಬಾಲಕ ಪ್ರಾಪ್ತ ವಯಸ್ಸಿಗೆ ಬಂದನಂತರ ಆಕೆಯನ್ನು/ಆತನನ್ನು ಮದುವೆಯಾಗಿ ಸಂತೋಷದಿಂದ ಬಾಳ್ವೆ ಮಾಡುವವರೆಂದು ಕಂಡುಬರಬೇಕು.
- ಇವರ ಹತ್ತಿರದ ಸಂಬಂಧಿಗಳು ಮದುವೆಗೆ ಸಮ್ಮತಿಸಬೇಕು ಮತ್ತು ಸಂತ್ರಸ್ತ ಬಾಲಕಿಗೆ ಅಪರಾಧಿಕ ಲೈಂಗಿಕ ಕ್ರಿಯೆಯ ಪರಿಣಾಮವಾಗಿ ಮಗು ಜನಿಸಿದ್ದರೆ ಇವೆಲ್ಲವುಗಳ ಹಿನ್ನೆಲೆಯಲ್ಲಿ ನ್ಯಾಯಾಲಯವು ಆರೋಪಿಗೆ ಅತ್ಯಂತ ಕನಿಷ್ಠ ಶಿಕ್ಷೆಯನ್ನು ವಿಧಿಸಲು ಮುಂದಾಗಬಹುದು. ಅಂದರೆ, ಅಪರಾಧಕ್ಕೆ ಇರುವ ಕನಿಷ್ಠ ಶಿಕ್ಷೆಗಿಂತ ಕಡಿಮೆ ಶಿಕ್ಷೆ ವಿಧಿಸಲು ಸಾಧ್ಯವಾಗಿದೆ.
- ಸುಪ್ರೀಂ ಕೋರ್ಟ್ ತನ್ನ ಒಂದು ತೀರ್ಪಿನಲ್ಲಿ ಕೊಲೆ ಪ್ರಯತ್ನ ಮಾಡಿದ (ಐಪಿಸಿ ಕಲಂ 307) ಮೊಕದ್ದಮೆಯಲ್ಲಿ ಆರೋಪಿಯು ಅಪರಾಧಿ ಎಂದು ಕಂಡುಬಂದಾಗ, ಜೀವಾವಧಿ ಶಿಕ್ಷೆ ವಿಧಿಸಬಹುದಾದ ಆ ಮೊಕದ್ದಮೆಯಲ್ಲಿ ಅಡಕವಾಗಿದ್ದ ಕೆಲವು ಬಲಿಷ್ಠ ಮತ್ತು ಸಂದರ್ಭಗಳ ಕಾರಣದಿಂದಾಗಿ ಒಂದು ದಿನದ ಶಿಕ್ಷೆಯನ್ನು ವಿಧಿಸಿದ ನಿದರ್ಶನವಿದೆ.

### ವಿವೇಚನೆಯ ನಡೆಯಿರಲಿ



2012ರಲ್ಲಿ ಪರಿಚಯಿಸಲಾದ ಪೋಕ್ಸೊ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳ ಎಲ್ಲ ರೂಪಗಳನ್ನು ಒಳಗೊಂಡಿದೆ. ಅದರ ಪ್ರಕಾರ 18ರ ವಯೋಮಾನಕ್ಕಿಂತ ಕಡಿಮೆ ವಯಸ್ಸಿನವರನ್ನು ಮಕ್ಕಳೆಂದು ಪರಿಗಣಿಸಲಾಗಿದ್ದು, ಅವರ ಮೇಲಿನ ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಮಕ್ಕಳನ್ನು ಅಶ್ಲೀಲ ಚಿತ್ರಣಗಳಲ್ಲಿ ಬಳಸುವುದು ಅಪರಾಧ. 18 ವರ್ಷದೊಳಗಿನವರು 'ಒಪ್ಪಿಗೆ' ನೀಡಿದರೂ ಅದು ಕಾನೂನಾತ್ಮಕವಾಗಿ ಅಪರಾಧ ಹಾಗೂ ಇದನ್ನು ಬಲಾತ್ಕಾರ ಎಂದೇ ಪರಿಗಣಿಸಲಾಗುತ್ತದೆ. ಶಿಕ್ಷೆಯೂ ಕಠಿಣವಾಗಿರುತ್ತದೆ.

ಆದರೆ ಈ ಕಾಯಿದೆಯಡಿ ಸುಳ್ಳು ಪ್ರಕರಣಗಳು ದಾಖಲಾಗುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಒಪ್ಪಿತ ಲೈಂಗಿಕ ಕ್ರಿಯೆಯಾಗಿದ್ದರೂ ಶಿಕ್ಷೆಗೆ ಒಳಗಾಗಿ ಕಠಿಣ ಶಿಕ್ಷೆ ಅನುಭವಿಸಿರುವ ಎಷ್ಟೋ ಪ್ರಕರಣಗಳಿವೆ. ಇದು ಇಬ್ಬರ ಭವಿಷ್ಯಕ್ಕೆ ಮಾರಕವೂ ಆಗುತ್ತದೆ.

ಪ್ರಸ್ತುತ ಸಮಾಜದಲ್ಲಿ ಲೈಂಗಿಕತೆಗೆ ಕಾನೂನುಬದ್ಧ ವಯಸ್ಸನ್ನು 18ರಿಂದ 16ಕ್ಕೆ ತರುವುದು ಸೂಕ್ತವೇ ಆಗಿದೆ. ಒಬ್ಬ ಹುಡುಗ ಹಾಗೂ ಹುಡುಗಿ ಇಬ್ಬರ ಒಪ್ಪಿಗೆಯಿಂದ ಲೈಂಗಿಕ ಸಂಬಂಧ ಇಟ್ಟುಕೊಂಡರೆ ಇದು ಅವರ ವಿವೇಚನೆಗೆ ಬಿಟ್ಟದ್ದು ಹಾಗೂ ಅದು ಅವರ ನಿರ್ಧಾರವಾಗಿರುತ್ತದೆ. ಯಾವುದೇ ಲೈಂಗಿಕ ಸಂಬಂಧಕ್ಕೆ ಎರಡು ಮುಖಗಳಿರುತ್ತವೆ. ಒಂದು ಬಲವಂತವಾಗಿ, ಮತ್ತೊಂದು ಒಪ್ಪಿಗೆಯಿಂದ. ಒಂದು ಗಂಡು ಮತ್ತು ಹೆಣ್ಣು ಸಂಕೋಚವಿಲ್ಲದೆ ಸಂಬಂಧದಲ್ಲಿ ಇದ್ದಾಗ ಅದನ್ನು ಆಕ್ಷೇಪಿಸುವುದು, ಅದೇ ಕಾರಣಕ್ಕೆ ಕಠಿಣ ಶಿಕ್ಷೆ ವಿಧಿಸುವುದು ತರವಲ್ಲ. ಆದರೆ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತ ಲೈಂಗಿಕ ಶಿಕ್ಷಣ ನೀಡುವುದೂ ಅವಶ್ಯಕವಾಗಿದೆ.

**–ಸುಮುಖ ಎಲ್.,** ರೇವಾ ವಿಶ್ವವಿದ್ಯಾಲಯ, ಬೆಂಗಳೂರು